ಶ್ರೀ ಕೆ.ಎಚ್. ರಂಗನಾಥ್ —ಸರ್ಕಾರ ಸ್ಪೇ ಅರ್ಜಿಯನ್ನು ವೆಕೇಟ್ ಮಾಡಿಸುವುದಕ್ಕೆ ಪ್ರಯತ್ನ ಪಟ್ಟರೂ ಇನ್ನು ತೀರ್ಮಾನವಾಗಿಲ್ಲ. ಅದು ತೀರ್ಮಾನವಾಗದೆ ಇರುವುದರಿಂದ ಹಾಗೆಯೇ ಉಳಿದುಕೊಂಡಿದೆ.

Sanction for Veterinary Hospital at Shethykere Village

335. SRI N. BASAVAIAH (Chikkanayakanahally).—Will the Minister of State for Animal Husbandry be pleased to state:—

(*a*) whether it is not a fact that a representation has been received by the Government requesting sanction of a Veterinary Hospital at Shethykere Village of Chikkanayakanahally Taluk;

(*b*) if so whether action has been taken by Government to accord sanction early ?

SRI B.G. BANAKAR (Minister of State for Animal Husbandry).—

(*a*) Yes.

(*b*) The sanction of Veterinary Dispensary will be considered during 1977-78 subject to availability of finances and depending on the merit of the case.

ಶ್ರೀ ಎನ್. ಬಸವಯ್ಯ —ನನ್ನ ಪ್ರಶ್ನೆಗೆ ಅರ್ಜಿ ಬಂದಿರುವುದು ನಿಜವೆಂದು ಹೇಳಿದ್ದೀರಿ. ಆದರೆ ಆ ಹೋಬಳಿಗೆ ಒಂದು ಪಶುಸಂಗೋಪನ ಆಸ್ಪತ್ರೆ ಕೊಡಬೇಕೆಂದು ಅಲ್ಲಿಯ ಜನರು ಒಂದು ನಿಧಿಯನ್ನು ಸಹ ಸಂಗ್ರಹಮಾಡಿ ಮತ್ತು ಕಟ್ಟಡ ಕಟ್ಟಲು ಸೈಟನ್ನು ಸಹ ಸಂಗ್ರಹ ಮಾಡಿದ್ದಾರೆ. ಆದ್ದರಿಂದ ಈ ಹೋಬಳಿ ಯಲ್ಲಿ ಒಂದು ಆಸ್ಪತ್ರೆ ಇಲ್ಲದೆ ಇರುವುದರಿಂದ ಆದಷ್ಟು ಬೇಗ ಒಂದು ಆಸ್ಪತ್ರೆಯನ್ನು ಕೊಡುತ್ತೀರಾ ?

†ಶ್ರೀ ಬಿ.ಜಿ. ಬಣಕಾರ್.—1977-78ರ ಸಾಲಿನಲ್ಲಿ ಇದಕ್ಕೆ ಪರಿಶೀಲನೆ ಕೊಟ್ಟು ಇದನು ನೋಡುತ್ತೇವೆ.

Facilities to Kannada Typists

384. SRI G. PUTTASWAMY (Mudigere).—Will the Minister for Excise and Kannada Development be pleased to state:—

(*a*) the number of Kannada typewriters supplied so far in the State;

(*b*) whether typists have been appointed by the Government after the supply of typewriters;

(*c*) if so, the number of Kannada typists appointed during the last two years (District wise information may be furnished);

(*d*) the facilities offered by the Government to the Kannada typists ?

SMT. E. E. VAZ (Minister for Excise and Kannada Development).—

(*a*) 2,538 Kannada typewriters have so far been supplied in the State.

(*b*) Apponintment of typists have been made in accordance with the requirement.

(*c*) In all 350 Kannada typists have been appointed so far during the last two years. (Districtwise information is appended)

(*d*) If a Kannada typist who is in Government service teaches Kannada typerwriting to another Government servant, each would be paid an incentive allowances at the rate of Rs. 50 subject to a limit of Rs. 500 per annum. If the Government servants were in service learnt the Kannada typing and typed atleast 25 pages per month, they would be paid an incentive allowance of Rs. 25 per month (upto one year). Instruction have been issued to the appointing authorities that preference should be given to those who know Kannada typing also for the posts of typists in Government offices.

(Districtwise information)

		Number of Kannada Typists Appointed
1.	Hassan	3
2.	Chitradurga	2
3.	Bidar	1
4.	Dharwar	6
5.	Bellary	2
6.	Bangalore	284
7.	Coorg	1
8.	Chickmagalur	2
9.	Belgaum	6
10.	South Kanara	8
11.	Shimoga	2
12.	Raichur	2
13.	Tumkur	2
14.	Bijapur	4
15.	Mysore	12
16.	North Kanara	7
17.	Kolar	2
18.	Mandya	2
19.	Gulbarga	2
		350

ಶ್ರೀ ಜಿ. ಪುಟ್ಟಸ್ವಾಮಿ.—ಎರಡು ಸಾವಿರದವರೆಗೂ ಬೆರಳಚ್ಚು ಯಂತ್ರಗಳನ್ನು ಸರಬರಾಜು ಮಾಡಿದ್ದೇವೆಂದು ತಿಳಿಸಿದ್ದೀರಿ ? ಅದರಲ್ಲಿ 350 ಜನ ಕನ್ನಡ ಬೆರಳಚ್ಚುಗಾರರನ್ನು ನೇಮಿಸಿದ್ದೆವೆಂದು ತಿಳಿಸಿದ್ದೀರಿ ? ಉಳಿದ ಬೆರಳಚ್ಚು ಯಂತ್ರಗಳಿಗೆ ಬೆರಳಚ್ಚುಗಾರರನ್ನು ನೇಮಿಸದೆ ಇರುವುದರಿಂದ ಸರ್ಕಾರಕ್ಕೆ ನಷ್ಟವಾಗುವುದು ಸರ್ಕಾರಕ್ಕೆ ತಿಳಿದು ಬಂದಿಲ್ಲವೆ ?

ಶ್ರೀಮತಿ ಇ.ಇ. ವಾಜ್.—ಮಾನ್ಯ ಸದಸ್ಯರು ಹೇಳುವಂತೆ 3-4 ಸಾವಿರ ಬೆರಳಚ್ಚುಗಾರರನ್ನು ನೇಮಕ ಮಾಡಬೇಕಾಗಿಲ್ಲ. ಎಲ್ಲ ಅವಶ್ಯಕವಾಗಿ ನೇಮಕ ಮಾಡಿಕೊಂಡು ಬಂದಿದೆ ಮಾಡುತ್ತೇವೆ, ನನ್ನ ಡಿಪಾರ್ಟ್‌ಮೆಂಟಿನಲ್ಲಿ ಇಂಗ್ಲೀಷ್ ಬೆರಳಚ್ಚುಗಾರರು ಏನು ಇದ್ದಾರೆ ಅವರಿಗೆ ಕನ್ನಡ ಬೆರಳಚ್ಚು ಜೆಬ್ ಮಾಡಲು ಬರುತ್ತದೆ ಅವರನ್ನು ನೇಮಿಸುತ್ತೇವೆ, ಎಲ್ಲೆಲ್ಲಿ ಕನ್ನಡ ಬೆರಳಚ್ಚುಗಾರರ ಅವಶ್ಯಕತೆ ಇದೆ ಅಲ್ಲಿ 350 ಜನರನ್ನು ಒದಗಿಸಿದ್ದೇವೆ.

ಶ್ರೀ ಜಿ. ಪುಟ್ಟಸ್ವಾಮಿ.—ನನಗೆ ತಿಳಿದುಬಂದಿರುವ ಪ್ರಕಾರ ಕನ್ನಡ ಬೆರಳಚ್ಚುಗಾರರನ್ನು ಎಲ್ಲೆಲ್ಲಿ ಯಂತ್ರಗಳನ್ನು ಸರಬರಾಜು ಮಾಡಿದ್ದಾರೆ ಅಲ್ಲೆಲ್ಲಾ ನೇಮಿಸದೆ ಇರುವುದರಿಂದ ಅಲ್ಲಿ ಕಚೇರಿಯ ವ್ಯವಹಾರವನ್ನು ಕನ್ನಡದಲ್ಲಿ ಮಾಡಲು ತೊಂದರೆಯಾಗಿದೆಯೆಂದು ಕೇಳಿದ್ದೇನೆ ?

ಶ್ರೀಮತಿ ಇ ಇ. ವಾಜ್. —ಎಲ್ಲೆಲ್ಲಿ ಕಚೇರಿಗಳಿಗೆ ಬೆರಳಚ್ಚು ಯಂತ್ರಗಳನ್ನು ಕೊಟ್ಟಿದ್ದೇವೆ. ಅಲ್ಲಿ ಒಂದೆರಡು ಕನ್ನಡ ಬೆರಳಚ್ಚು ಯಂತ್ರಗಳು ಇರಬೇಕು ಎಂದು ಸರ್ಕಾರ ಆದೇಶಕೊಟ್ಟಿದೆ ಜೊತೆಗೆ ಬೇಗ ಆಡಳಿತ ವ್ಯವಹಾರವನ್ನು ಕನ್ನಡದಲ್ಲಿಯೇ ಮಾಡಬೇಕೆನ್ನುವ ಉದ್ದೇಶವೂ ಸರ್ಕಾರಕ್ಕೆ ಇರುವುದರಿಂದ ಸಾಕಷ್ಟು ಎಲ್ಲ ವ್ಯವಸ್ಥೆಯನ್ನು ಒದಗಿಸುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ತಮಗೆ ಕನ್ನಡವನ್ನು ಆಡಳಿತ ಭಾಷೆಯನ್ನು ಮಾಡಲು ಉದ್ದೇಶವಿರುವುದರಿಂದ ಹಾಲಿ ಇರತಕ್ಕ ಕನ್ನಡ ಬೆರಳಚ್ಚು ಬರತಕ್ಕ ಆಂಗ್ಲ ಬೆರಳಚ್ಚುಗಾರರಿಗೆ ವಿಶೇಷವಾಗಿ ಏನಾದರೂ ಸೌಲತ್ತು ಕೊಡುತ್ತಿದ್ದೀರಾ ? ಆದು ಅಲ್ಲದೆ ಕನ್ನಡ ಅಭಿವೃದ್ಧಿಗೆ ಮೂಲಭೂತವಾಗಿ ಎಲ್ಲಾ ಕಚೇರಿಗಳಲ್ಲಿಯೂ ಕನ್ನಡ ಬೆರಳಚ್ಚುಗಾರರನ್ನು ನೇಮಿಸಿ ಕನ್ನಡ ಬೆರಳಚ್ಚು ಯಂತ್ರಗಳನ್ನು ಒದಗಿಸಿ ಮೊದಲು ಕನ್ನಡದಲ್ಲಿಯೇ ಎಲ್ಲಾ ವ್ಯವಹಾರವನ್ನು ಜಾರಿಗೆ ತರಬೇಕೆಂದು ಈಗಲಾದರೂ ಮನಸ್ಸು ಮಾಡುತ್ತೀರಾ.

ಶ್ರೀ ಡಿ. ದೇವರಾಜ್ ಅರಸ್.—ಕನ್ನಡದ ಬಗ್ಗೆ ಸಾಕಷ್ಟು ಅರಿವು ಸರ್ಕಾರದ ಗಮನದಲ್ಲಿದೆ. ತಮ್ಮ ಅಕೌಂಟ್ಸೆ ಏನು ಇದೆ ಅದಕ್ಕಿಂಥಲೂ ನಮಗೆ ಹೆಚ್ಚಿಗೆ ಇಲ್ಲದಿದ್ದರೂ ನಿಮಗಿರುವಷ್ಟು ನಮಗೂ ಇದೆ, ಸುಮಾರು 2538 ಯಂತ್ರಗಳು ನಮ್ಮಲ್ಲಿ ಇವೆ. ಮತ್ತೆ ಶಿಕ್ಷಣ ಕೊಡತಕ್ಕಂಥ ಯೋಜನೆಯನ್ನು ಇಟ್ಟುಕೊಂಡಿದ್ದೇವೆ. ನಾವು ಶೀಘ್ರವಾಗಿ ಆಡಳಿತದಲ್ಲಿ ಕನ್ನಡವನ್ನು ಬಳಕೆಯಲ್ಲಿ ತರಬೇಕೆನ್ನುವುದು ನಮ್ಮ ಅಭಿರಾಷೆ ಆದರೆ ಒಂದೆರಡು ವರ್ಷಗಳಲ್ಲಿ ಎಲ್ಲವನ್ನು ಮಾಡಲಕ್ಕೆ ಬರುವುದಿಲ್ಲ ಒಂದು ಸಂದರ್ಭದಲ್ಲಿ ಬೆರಳಚ್ಚು ಯಂತ್ರಗಳು ಇರಲಿಲ್ಲ ಸಾಕಷ್ಟು ತರಬೇತಿ ಹೊಂದಿದ ಜನರು ಇರುವುದಿಲ್ಲ. ಕೆಳಮಟ್ಟದಲ್ಲಿ ನೂರಾರು ವರ್ಷಗಳಿಂದ ಬಂದಿರುವ ವ್ಯವಹಾರವನ್ನು ತಕ್ಷಣವೇ ಸ್ವಿಚ್ ಓವರ್ ಮಾಡುವುದಕ್ಕೆ ಆಗುವುದಿಲ್ಲ, ಇದು ಬಳಕೆಗೆ ಬರಬೇಕಾದರೆ ಸ್ವಲ್ಪ ಕಾಲಬೇಕಾಗುತ್ತದೆ. ಮತ್ತೆ ಈಗ ಕಚೇರಿಗಳಲ್ಲಿ ಏನು 350 ಜನರು ಕೆಲಸಮಾಡುತ್ತಿದ್ದಾರೆ ಅವರಿಗೆಲ್ಲಾ ಬಹುಮಾನಗಳನ್ನು ಗೊತ್ತು ಮಾಡಿದೆ. ಇನ್ನು ಅನೇಕ ರೀತಿಯ ಸೌಲತ್ತುಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಮುಖ್ಯಮಂತ್ರಿಗಳು ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಲು ಸ್ವಲ್ಪ ಕಾಲ ಬೇಕಾಗುತ್ತದೆ. ಎಂದು ತಿಳಿಸಿದರು. ಆದ್ದರಿಂದ ಇನ್ನು ದಶಮಾನ ಅಥವಾ ಶತಮಾನ ಬೇಕಾಗಬಹುದು.

ಶ್ರೀ ಜಿ. ಪುಟ್ಟಸ್ವಾಮಿ.—ಮಂತ್ರಿಗಳ ಕಚೇರಿಯಲ್ಲಿ ಕನ್ನಡ ಬೆರಳಚ್ಚುಗಾರರು ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ಪ್ರತಿಯೊಬ್ಬ ಮಂತ್ರಿಗಳ ಕಚೇರಿಯಲ್ಲಿಯು ಕನ್ನಡ ಬೆರಳಚ್ಚುಗಾರರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಪ್ರಯತ್ನಮಾಡುತ್ತೀರಾ ?

ಶ್ರೀಮತಿ ಇ.ಇ. ವಾಜ್.—ಯಾವ ಯಾವ ಕಚೇರಿಗಳಲ್ಲಿ ಕನ್ನಡ ಬೆರಳಚ್ಚುಗಾರರ ಅವಶ್ಯಕತೆ ಇದೆ ಎನ್ನುವುದು ನನ್ನ ಹತ್ತಿರ ಮಾಹಿತಿ ಇಲ್ಲ ಮಂತ್ರಿಗಳಿಗೆ ಕನ್ನಡ ಬೆರಳಚ್ಚುಗಾರರು ಬೇಕೆಂದರೆ ನಮ್ಮ ಇಲಾಖೆಯಿಂದ ಒದಗಿಸಿಕೊಡುತ್ತೇವೆ.

ಶ್ರೀ ಜಿ. ಪುಟ್ಟಸ್ವಾಮಿ —ಈಗ ಈ ಯಂತ್ರಗಳನ್ನು ಅನೇಕ ಜಿಲ್ಲೆಗಳಿಗೆ ಒದಗಿಸಿಲ್ಲ. ಏಲ್ಲ ಯಾದರೂ ಸರಬರಾಜು ಮಾಡಿದ್ದರೆ ಅದು ಬಹಳ ಕಡಿಮೆ. ಅನೇಕ ಜಿಲ್ಲಾಖೆಗಳಲ್ಲಿ ಕೇಳಿಯೇ ಇಲ್ಲ. ಬೆರಳಚ್ಚುಗಾರರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಮನಸ್ಸು ಮಾಡಿಲ್ಲ ಅದಕ್ಕೆ ಕಾರಣವೇನು

ಶ್ರೀ ಡಿ ದೇವರಾಜ್ ಅರಸ್.—ಮಾನ್ಯ ಸದಸ್ಯರು ಎಲ್ಲಾ ಜನರಲೈಸ್ ಮಾಡುವುದರ. ಬದಲು ಅವರಿಗೆ ಎಲ್ಲಿ ಬೇಕಾಗಿದೆ ಅವನ್ನು ತಿಳಿಸಿದರೆ ಅಲ್ಲಿಗೆ ಕನ್ನಡ ಬೆರಳಚ್ಚು ಮತ್ತು ಬೆರಳಚ್ಚುಗಾರರನ್ನು ಒದಗಿಸುವುದಕ್ಕೆ ಪ್ರಯತ್ನವಾಡೋಣ. ಎಲ್ಲಿ ಕನ್ನಡ ಬೆರಳಚ್ಚುಗಾರರನ್ನು ತೆಗೆದುಕೊಂಡಿಲ್ಲ ಮತ್ತು ಕನ್ನಡ ಶೀಘ್ರ ಲಿಪಿ ಕಲಿತಿರತಕ್ಕಂಥವರು ಇದ್ದಪಕ್ಷದಲ್ಲಿ ಅವರನ್ನು ಇವರು ಎಂಪ್ಲಾಯ್ ಮಾಡಿಲ್ಲ. ಅದನ್ನು ತಿಳಿಸಿದರೆ ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ಪುಟ್ಟಸ್ವಾಮಿ.—ಕನ್ನಡ ಬೆರಳಚ್ಚು ಯಂತ್ರಗಳನ್ನು ಎಲ್ಲೆಲ್ಲಿ ಸರಬರಾಜು ಮಾಡಿದ್ದೀರಿ ಅಲ್ಲಿ ಸರ್ಕಾರಿ ಸೇವೆಯಲ್ಲಿರುವವರು ಕನ್ನಡ ಬೆರಳಚ್ಚು ಕಲಿತಿರುವವರಿಗೆ ಇದುವರೆಗೆ ಎಷ್ಟು ಮಂದಿ ನೌಕರರಿಗೆ ಪ್ರೋತ್ಸಾಹ ಧನ ಮತ್ತು ಪರಿಹಾರವನ್ನು ಕೊಟ್ಟಿದ್ದೀರಿ?

ಶ್ರೀ ಡಿ. ದೇವರಾಜ್ ಅರಸ್.—ನುಮಾರು 84 ಪ್ರೈಸ್ ಕೊಟ್ಟಿದ್ದೇವೆ. ಮತ್ತೆ 84ಜನರು ಅರ್ಜ್ನನ್ನು ಮತ್ತು ಪ್ರೈಸ್ ತೆಗೆದುಕೊಂಡಿದ್ದಾರೆ ನುಮಾರು ಜನರಿಗೆ ಕ್ಯಾಶ್ ಪ್ರೈಸ್ 200ರೂಪಾಯಿಗಳವರೆಗೆ ಕೊಟ್ಟಿದೆ. ಅಧ್ಯಕ್ಷರಲ್ಲಿ ಏನಂತಿ ಏನೆಂದರೆ ನನ್ನಲ್ಲಿ ಈಗ ಸದ್ಯದಲ್ಲಿ ಈಬಗ್ಗೆ ಸರಿಯಾದ ಮಾಹಿತಿಗಳಿಲ್ಲ.

1-30 P. M.

Making Kannada as official Language of the State

385. SRI G. PUTTASAWMY (Mudigere).—Will the Chief Minister be pleased to state:—

(*a*) whether there are any difficulties in making the Kannada Language as Administrative Language of the State, if so what are they ;

(*b*) whether the Kannada Administrative Language Training Camps are being conducted, if so. how many persons are under training in these institutes and the number of persons so far trained, (the details for the last two years may be furnished) ;

(*c*) the facilities extended by Government at present to the Government servants who carry out all the office business in Kannada Language ?

SRI D. DEVARAJ URS (Chief Minister).—

(*a*) Kannada language is being used in all Government office business at Taluk and District levels. The attempts are being made to introduce the Kannada at all levels by stages. The difficulties arising out of non-supply of the Kannada Typewriters have been removed. So far 2,532 Kannada Typewriters have been supplied. There is enough stock of typewriters.